'ಸ್ವಾಲೋ, ಸ್ವಾಲೋ, ಪುಟ್ಟ ಸ್ವಾಲೋ' ಎಂದು ರಾಜಕುಮಾರ ಹೇಳತೊಡಗಿದ. 'ನಗರದ ಆ ಪಕ್ಕಕ್ಕೆ ದೂರದಲ್ಲಿರುವ ಒಂದು ಅಟ್ಟದ ಮೇಲಿರುವ ಕೋಣೆಯಲ್ಲಿ ಓರ್ವ ಯುವಕನಿದ್ದಾನೆ. ಕಾಗದದ ಹಾಳೆಗಳು ಹರವಿದ ಡೆಸ್ಕ್ ಒಂದರ ಮೇಲೆ ಆತ ತಲೆ ಇಟ್ಟು ಬಾಗಿ ಕುಳಿತಿದ್ದಾನೆ. ಬದಿಯಲ್ಲಿ ಬಾಡಿದ ವಾಯೋಲೆಟ್ ಹೂಗಳ ಹೂದಾನಿಯಿದೆ. ಕಂದುವರ್ಣದ ಆತನ ಕೂದಲುಗಳು ಒರಟಾಗಿವೆ. ಅಲ್ಲದೆ ಆತನ ತುಟಿಗಳು ದಾಳಿಂಬೆಯಂತೆ ಕೆಂಪಾಗಿವೆ. ಆತನಿಗೆ ಕನಸು ತುಂಬಿರುವ ದೊಡ್ಡ ಕಣ್ಣುಗಳಿವೆ. ನಾಟ್ಯಶಾಲೆಯ ನಿರ್ದೇಶಕನಿಗಾಗಿ ಆತ ಒಂದು ನಾಟಕ ಬರೆದು ಮುಗಿಸಬೇಕಾಗಿದೆ. ವಿಪರೀತ ಚಳಿಯಿಂದಾಗಿ ಆತನಿಗೆ ಬರೆಯಲು ಸಾಧ್ಯವಾಗುತ್ತಿಲ್ಲ. ಒಲೆಯ ಗೂಡಿನಲ್ಲಿ ಬೆಂಕಿ ಕೂಡ ಇಲ್ಲ. ಹಸಿವೆಯಿಂದ ಬಳಲಿರುವ ಆತ ಆಗಾಗ ಮೂರ್ಛಿತನಾಗುತ್ತಾನೆ.'

'ಹಾಗಿದ್ದರೆ ಇನ್ನೊಂದು ರಾತ್ರಿ ನಾನು ನಿನ್ನ ಜೊತೆ ಕಳೆಯುವೆ' ಎಂದು ಸ್ವಾಲೋ ಹೇಳಿತು, ನಿಜಕ್ಕೂ ಅದಕ್ಕೆ ಒಳ್ಳೆಯ ಹೃದಯವಿತ್ತು. 'ಆತನಿಗೆ ಇನ್ನೊಂದು ಮಾಣಿಕ್ಯವನ್ನು ಒಯ್ದು ಕೊಡಲೇ?' ಎಂದು ಕೇಳಿತು.

'ಅಯ್ಯೋ, ನನ್ನ ಬಳಿ ಈಗ ಮಾಣಿಕ್ಯ ಎಲ್ಲಿದೆ?' ಎಂದು ರಾಜಕುಮಾರ ಪರಿತಪಿಸಿದ. 'ಸದ್ಯ ನನ್ನ ಬಳಿ ಉಳಿದಿರುವುದೇನಿದ್ದರೂ ನನ್ನ ಕಣ್ಣುಗಳು ಮಾತ್ರ. ಅವುಗಳನ್ನು ವಿರಳಾತಿವಿರಳ ರತ್ನಗಳಿಂದ ಮಾಡಿದ್ದಾರೆ, ಅವುಗಳಲ್ಲಿ ಒಂದನ್ನು ಕಿತ್ತುಕೊಂಡು ಹೋಗಿ ಆತನಿಗೆ ಕೊಟ್ಟುಬಿಡು. ರತ್ನ ವ್ಯಾಪಾರಿಗೆ ಅದನ್ನು ಮಾರಿ ದೊರೆತ ಹಣದಿಂದ ಆತ ಊಟ, ಉರುವಲು ತರಿಸಿಕೊಂಡು ಆ ನಾಟಕ ಬರೆದು ಮುಗಿಸಲಿ.'

'ನನ್ನ ಪ್ರೀತಿಯ ರಾಜಕುಮಾರ, ನಾನು ಈ ಕೆಲಸ ಮಾಡಲಾರೆ' ಎನ್ನುತ್ತ ಸ್ವಾಲೋ ಅಳತೊಡಗಿತು.

'ಸ್ವಾಲೋ, ಸ್ವಾಲೋ, ಪುಟ್ಟ ಸ್ವಾಲೋ, ದಯವಿಟ್ಟು ನನ್ನ ಆಜ್ಞೆಯನ್ನು ಪಾಲಿಸು' ಎಂದು ರಾಜಕುಮಾರ ಅಂಗಲಾಚಿದ.

ಅದರಂತೆ ಸ್ವಾಲೋ ರಾಜಕುಮಾರನ ಕಣ್ಣನ್ನು ಕಿತ್ತುಕೊಂಡು ಆ ಯುವ ಲೇಖಕನ ಬಳಿಗೆ ಹಾರಿ ಹೋಯಿತು. ಮೇಲ್ಛಾವಣಿಯ ಒಂದು ಕಿಂಡಿಯಿಂದ ಕೋಣೆಯ ಒಳಗೆ ನುಗ್ಗಲು ಅದಕ್ಕೆ ಕಷ್ಟವಾಗಲಿಲ್ಲ. ಆ ಯುವಕ ತನ್ನೆರಡೂ ಕೈಗಳಲ್ಲಿ ತಲೆ ಹುದುಗಿಸಿ ಕುಳಿತಿದ್ದರಿಂದ ಆತನಿಗೆ ರೆಕ್ಕೆ ಬಡಿತದ ಸದ್ದು ಕೇಳಲಿಲ್ಲ. ಆತ ತಲೆ ಮೇಲೆತ್ತಿ ನೋಡಿದಾಗ ಸುಂದರವಾದ ರತ್ನದ ಹರಳು ಅಲ್ಲಿ ಬಿದ್ದಿರುವುದನ್ನು ಕಂಡ.

'ವಿಶಾಲ ಹೃದಯದ ನನ್ನ ಆರಾಧಕನೊಬ್ಬ ಇದನ್ನು ಕಳಿಸಿರಬೇಕು. ಅಂತೂ ನನ್ನನ್ನು ಮೆಚ್ಚಿಕೊಳ್ಳುವವನೊಬ್ಬ ಎಲ್ಲೋ ಇದ್ದಾನೆ. ನಾನೀಗ ನಾಟಕ ಬರೆದು ಮುಗಿಸುವೆ.' ಎನ್ನುತ್ತಿರುವಂತೆ ಆತನ ಮುಖ ಹರ್ಷಚಿತ್ತವಾಯಿತು.

ಮರುದಿನ ಸ್ವಾಲೋ ಬಂದರಿನತ್ತ ಹಾರಿ ಹೋಗಿ ಹಡಗಿನ ಹಾಯಿಸ್ತಂಭದ ಮೇಲೆ ಕುಳಿತುಕೊಂಡಿತು. ಅಲ್ಲಿ ನಾವಿಕರು ಹಗ್ಗ ಕಟ್ಟಿ ಸರಕುಗಳ ಮೂಟೆಗಳನ್ನು ಎಳೆಯುತ್ತಿದ್ದರು. 'ಹೋಯ್, ಹೋಯ್, ಹೋಯ್' ಎಂದು ಅವರು ಕೂಗುತ್ತಿರುವಂತೆ ಮೂಟೆಗಳು ಮೇಲಕ್ಕೆ ಬರುತ್ತಿದ್ದವು. 'ನಾನಿಂದು ಇಜಿಪ್ಟಿಗೆ ಹೋಗಲಿರುವೆ' ಎಂದು ದೊಡ್ಡ ದನಿಯಲ್ಲಿ ಅರಚಿತು. ಆದರೆ ಯಾರೂ ಅದರತ್ತ ಗಮನ ಕೊಡಲಿಲ್ಲ. ನಂತರ

